ದಿನಾಂಕ: 02–09–2023 ರಂದು ಸಾಕ್ಷಿದಾರರನ್ನು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು: ಶ್ರೀ ಎಸ್ ಎಮ್ ಜಿ ವಕೀಲರಿಂದ :-**

1. ಬಸ್ಸಮ್ಮ ಪ್ರತಿವಾದಿಗಳ ಮೇಲೆ ಕೇಸ್ ಹಾಕಿದ್ದಾಳೆ. ಯಾವ ಊರಿನ ಆಸ್ತಿಗಳ ಮೇಲೆ ಕೇಸ್ ಹಾಕಿದ್ದಾಳೆ ಎಂದು ಗೊತ್ತು. ಸರ್ವೆ ನಂಬರ್ 381 ಆನೆಹೊಸೂರು ಗ್ರಾಮದ ಜಮೀಣು, ಸರ್ವೆ ನಂಬರ್ 338, ಆನೆಹೊಸೂರು ಗ್ರಾಮದ ಜಮೀನು, ಸರ್ವೆ ನಂಬರ್ 18, 19, 20 ಬೆಂಡೋಣೀ ಗ್ರಾಮದ ಜಮೀನುಗಳು, ಸರ್ವೆ ನಂಬರ್ 47 ಜಾವೂರು ಗ್ರಾಮದ ಜಮೀನು, ಇಷ್ಟು ಆಸ್ತಿಗಳ ಮೇಲೆ ಕೇಸ್ ಹಾಕಿದ್ದಾರೆ. ದಾವಾದ ಆಸ್ತಿಗಳು ಹಿರೆಗದ್ದೆಪ್ಪನಿಂದ ಖರೀದಿಸಿದ ಆಸ್ತಿಗಳು, ಬೆಂಡೋಣಿ ಆಸ್ತಿಗಳು ಇನಾಂ ಆಸ್ತಿಗಳು ಎಂದು ನುಡಿಯುತ್ತಾರೆ. ಖರೀದಿಸಿದ ಆಸ್ತಿಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸುತ್ತೆನೆ. ದಾವಾದ ಆಸ್ತಿಗಳು ಮನೆತನದ ಹಿರಿಯರ ಆಸ್ತಿಗಳು ಖರೀದಿಸಿದ ಆಸ್ತಿಗಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

2. ವಾದಿ ಸಿವಿಲ್ ಜಡ್ಜ್ ಲಿಂಗಸೂಗೂರು ನ್ಯಾಯಾಲಯದಲ್ಲಿ ನಮ್ಮ ಮೇಲೆ ಕೇಸ್ ಹಾಕಿದ್ದಾರೆಂದರೆ ಸರಿ. ಅಸಲು ದಾವಾ ನಂಬರ್ 65/2017 ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ. ಅದರಲ್ಲಿ ಲಕ್ಷ್ಮಮ್ಮ ಉರ್ಫ್ ಲಕ್ಷ್ಮವ್ವ . ತಕರಾರು ಹಾಕಿದ್ದಾಳೆ ಆಕೆ ಸತ್ತ ಮೇಲೆ ನಾವು ಹಾಕಿದ್ದೇವೆ. ಸರ್ವೆ ನಂಬರ್ 51 ಕ್ಕೆ ಮಾತ್ರ ಸಂಬಂಧಿಸಿದಂತೆ ಕೇಸ್ ನಡೆಯುತ್ತಿದೆ ಸದರಿ ಆಸ್ತಿಯನ್ನು ಈ ಕೇಸ್ ನಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಸದರಿ ಆಸ್ತಿ ಬಸ್ಸಮ್ಮನ ತವರು ಮನೆ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿ ಆಸ್ತಿಯು ನನ್ನ ತಾಯಿಯಾದ ತಿಪ್ಪಮ್ಮನದು ಎಂದು ನುಡಿಯುತ್ತಾರೆ. ತಿಪ್ಪಮ್ಮನ ತಾಯಿ ಯ ಹೆಸರು ಲಕ್ಷ್ಮಮ್ಮ

ಉರ್ಪ್ ಲಕ್ಷ್ಮವ್ವ . ಆಕೆಗೆ ಇಬ್ಬರು ಮಕ್ಕಳೂ ಅವರ ಹೆಸರು ಗಂಗಮ್ಮ ಮತ್ತು ತಿಪ್ಪಮ್ಮ ಎಂದರೆ ಸರಿಯಲ್ಲ. ತಿಪ್ಪಮ್ಮ ಮಾತ್ರ ಎಂದು ನುಡಿಯುತ್ತಾರೆ ಹಿರೇ ಗದ್ದೆಪ್ಪನ ಮೊದಲನೆ ಹೆಂಡತಿ ಹೆಸರು ಬಸ್ಸಮ್ಮ ಎಂದರೆ ಸರಿ. ಬಸ್ಸಮ್ಮ ಹಿರೆಗದ್ದೆಪ್ಪ ಮತ್ತು ಗಂಗಮ್ಮನ ಮಗಳು ಎಂದರೆ ಸರಿಯಲ್ಲ. ವಾದಿ ಬಸ್ಸಪ್ಪ 1 ವರ್ಷದವಳಿದ್ದಾಗ, ಗಂಗಮ್ಮ ತೀರಿಕೊಂಡಳು ನಂತರ ಹಿರೇ ಗದ್ದೆಪ್ಪ ಗಂಗಮ್ಮನ ತಂಗಿಯಾದ ತಿಪ್ಪಮ್ಮನನ್ನು ಮದುವೆಯಾದ ಎಂದರೆ ಸರಿಯಲ್ಲ. ನಾನು ಗಂಗಮ್ಮನ ಮಗಳು ಬಸ್ಸಮ್ಮನಿಗೆ ಪಾಲು ಕೊಡುವುದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಲಕ್ಷ್ಮಮ್ಮ ಉರ್ಪ್ ಲಕ್ಷ್ಮವ್ವ ಅಸಲು ದಾವಾ ನಂಬರ್ 65/2017 ರಲ್ಲಿ ಹಾಕಿದಂತಹ ಲಿಖಿತ ಹೇಳಿಕೆಯನ್ನು ಸಾಕ್ಷಿ ಒಪ್ಪಿಕೊಂಡಿದ್ದು ಸದರಿ ದಾಖಲಾತಿಯನ್ನು ನಿ ಪಿ 13 ಎಂದು ಗುರುತಿಸಲಾಯಿತು. ವಾದಿ ಬಸ್ಸಮ್ಮ ಹಿರೇಗದ್ದೆಪ್ಪನ ಮಗಳು ಅಲ್ಲ ಅಂತಾ ಲಿಖಿತ ಹೇಳೀಕೆಯಲ್ಲಿ ತೆಗೆದುಕೊಂಡಿದ್ದೆವೆಂದರೆ ಸರಿ. ಬಸ್ಸಮ್ಮ ಯಾರ ಮಗಳು ಎಂಬುದರ ಬಗ್ಗೆ ನಾನು ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿ. ಮತ್ತು ಯಾರ ಮಗಳು ಎಂದು ಗೊತ್ತಿಲ್ಲ ಎಂದರೆ ಸರಿ. ಹಿರೇಗದ್ದಪ್ಪನಿಗೆ ಇಬ್ಬರು ಹೆಂಡರು ಎಂಬ ವಿಷಯ ಸುಳ್ಳಿನಿಂದ ಕೂಡಿದೆ, ಹಿರೆಗದ್ದೆಪ್ಪನ ಮೊದಲನೇ ಹೆಂಡತಿ ಬಸ್ಸಮ್ಮ ಎಂದರೆ ಸರಿಯಲ್ಲ. ಹಿರೇಗದ್ದೆಪ್ಪನಿಗೆ 3 ಜನ ಹೆಂಡರು ಎಂದರೆ ಸರಿಯಲ್ಲ. ಬಸ್ಸಮ್ಮನ ಮಕ್ಕಳು ಬಸ್ಸಪ್ಪ ಹಾಗೂ ಯಮನವ್ವ ಎಂದರೆ ಸರಿ. ಬಸ್ಸಪ್ಪ ತೀರಿಕೊಂಡಿದ್ದಾನೆಂದರೆ ಸರಿ. ಬಸ್ಸಪ್ಪನ ಹೆಂಡತಿ ಲಕ್ಕಮ್ಮ ತೀರಿಕೊಂಡಿದ್ದಾಳೆಂದರೆ ಸರಿ. ಪ್ರತಿವಾದಿ 1 ರಿಂದ 3 ಮೃತ ಬಸ್ಸಪ್ಪನ ಮಕ್ಕಳು ಎಂದರೆ ಸರಿ. ರೇಣುಕಮ್ಮ ಕೂಡಾ ತರಕಾರು ಹಾಕಿದ್ದಾಳೆಂದರೆ ಸರಿ.

3. ಹಿರೇಜಾವೂರಿನ ಆಸ್ತಿ ಮಾರಾಟ ಮಾಡುವಾಗ ಬಸ್ಸಮ್ಮನಿಗೆ ಹೇಳಿಲ್ಲ ಎಂದರೆ ಆಕೆ ನಮಗೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ದಾಖಲಾತಿಗಳು ಖೊಟ್ಟಿಯಾಗಿವೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಯಲ್ಲಿ ಹಿರೆಗದ್ದೆಪ್ಪನ ಎಲ್ಲಾ ವಾರಸುದಾರರು ಬಂದಿಲ್ಲ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯೊಂದಿಗೆ ಮಿಲಾಪಿಯಾಗಿ ದಾಖಲಾತಿ

ಹಾಜರುಪಡಿಸಿದ್ದೇವೆಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಬೇಕೆಂದು ನಾವು ದಾಖಲಾತಿ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಶಾಂತಮ್ಮ ಯಮನಮ್ಮನ ಮಗಳು ಆಕೆ ಕೂಡಾ ತಕರಾರು ಹಾಕಿದ್ದಾಳೆಂದರೆ ಸರಿಯಲ್ಲ. ವಾದಿ ಪಾಲು ಕೊಡು ಅಂತಾ ಕೇಳಿದಳು ನಾನು ನಿರಾಕರಿಸಿದ್ದಕ್ಕಾಗಿ ಕೇಸ್ ಹಾಕಿದ್ದಾಳೆಂದರೆ ಸರಿಯಲ್ಲ. ದಾವಾದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದರಿಂದ ವಾದಿಗೆ ಭಾಗ ಇದೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯ ಮತ್ತು ಲಿಖಿತ ಹೇಳಿಕೆಯಲ್ಲಿ ಬರೆದ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

( ಚಂದ್ರಶೇಖರ ಪಿ. ದಿಡ್ಡಿ )

ಹಿರಿಯ ಸಿವಿಲ್ ನ್ಯಾಯಾಧೀಶರು,

ಲಿಂಗಸೂಗುರು.